ಈ) ಹುಡ್ಕೋ ಮತ್ತು ಪುರಸಭೆಯಿಂದ ಹಣ ಬಂದ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೆ, ಬಂಟ್ವಾಳ ಪುರಸಭೆ ಕ್ಷೇತ್ರದೊಳಗೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಕೇಳಿದರೆ ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಉತ್ತರ ಕೊಟ್ಟಿದ್ದಾರೆ. ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಜಾಸ್ತಿ ಗಮನವನ್ನು ಕೊಡುತ್ತೇವೆಂದು ಹೇಳುತ್ತಾರೆ. ಇವತ್ತು ಬಂಟ್ವಾಳ ಪುರಸಭೆಯು ಆರ್ಥಿಕವಾಗಿ ಬಹಳ ಹಿಂದುಳಿದಿದೆ. ಆ ಪುರಸಭೆ ಹಿಂದುಳಿಯಲಿಕ್ಕೆ ಅದಕ್ಕೆ ಜಾಸ್ತಿ ಗ್ರಾಮಾಂತರ ಪ್ರದೇಶಗಳು ಬರುತ್ತವೆ. ಅಂತಹ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಬೇಕಾದರೆ ಪುರಸಭೆಯಿಂದ ಹಣವನ್ನು ಕೊಡಬೇಕಾಗುತ್ತದೆ. ಹಣ ಕೊಡುವ ಪರಿಸ್ಥಿತಿಯಲ್ಲಿ ನಮ್ಮ ಪುರಸಭೆ ಇಲ್ಲ. ಆದರೂ ಕೂಡ ಅಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಬಂಟ್ವಾಳ ಪುರಸಭೆ ಮಧ್ಯದಲ್ಲಿ ನೇತ್ರಾವತಿ ನದಿ ಹರಿಯುತ್ತಿದೆ. ಬೇಕಾದಷ್ಟು ನೀರು ಇದೆ. ಮಂಗಳೂರು ಕಾರ್ಪೊರೇಷನ್ ಏರಿಯಾಕ್ಕೆ ಅಲ್ಲಿಂದ ನೀರನ್ ಸಪ್ಲೈ ಮಾಡುತ್ತಿದ್ದಾರೆ. ಅಂತಹ ಪರಿಸ್ಥಿತಿ ಇರುವಾಗ ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಮಂಗಳೂರು ನಗರಕ್ಕೆ ನೀರನ್ನು ಸಪ್ಲೈ ಮಾಡುತ್ತಿದ್ದಾರೆ ನಮ್ಮಲ್ಲಿ ಕುಡಿಯುವ ನೀರಿನ ಅಭಾವವಿದೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮನ್ನು ಒತ್ತಾಯ ಮಾಡುವುದೇನೆಂದರೆ, ಈಗ ಯೋಜನೆಯನ್ನು ಸರ್ಕಾರ ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಕೊನೆಯ ಪಕ್ಷ 10-15 ಬೋರ್‌ವೆಲ್‌ಗಳನ್ನು ಮಂಜೂರು ಮಾಡಿ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರದಿಂದ ಅಡ್ಮಿನಿಸ್ಟೇಟಿವ್ ಅಪ್ರೂವಲ್ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ 1991-92 ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಿಕೊಳ್ಳಲಾಗುವುದು. ಮಾನ್ಯ ಸದಸ್ಯರು ಹೇಳಿದ ಹಾಗೆ ಎಮರ್ಜೆನ್ಸಿಗಾಗಿ ಬೋರ್‌ವೆಲ್‌ಗಳನ್ನು ಹಾಕಲಿಕ್ಕೆ ಹಣವನ್ನು ರಿಲೀಸ್ ಮಾಡಿದ್ದೇವೆ. ಅದರ ಬಗ್ಗೆ ಆದೇಶ ಕೊಟ್ಟು ಕೊಳವೆ ಬಾವಿಗಳನ್ನು ತೆಗೆಯಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಹನಿ ನೀರಾವರಿ ಅಳವಡಿಸಿದ ರೈತರಿಗೆ ನೀಡಲಾದ ರಿಯಾಯಿತಿ

1761 - ಶ್ರೀ ಎಸ್. ಅಜಯ ಕುಮಾರ್ ಸರನಾಯಕ್ (ಬಾಗಲಕೋಟೆ) : ಮಾನ್ಯ ಕೃಷಿ ಮತ್ತು ತೋಟಗಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರುಸುವರೆ?

ಅ) *1990-91ನೇ ವರ್ಷದಲ್ಲಿ ಹನಿ ನೀರಾವರಿ ಅಳವಡಿಸಿದ ರೈತರಿಗೆ ನೀಡಲಾದ ರಿಯಾಯಿತಿ ಹಣ ಎಷ್ಟು?*

ಆ) *ಅದರಲ್ಲಿ ಸಣ್ಣ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರಿಗೆ ನೀಡಿರುವ ರಿಯಾಯಿತಿಯ ಹಣ ಎಷ್ಟು? (ಪ್ರತ್ಯೇಕ ವಿವರ ನೀಡುವುದು)*

ಇ) *ಈ ವರ್ಷದಲ್ಲಿ ಹನಿ ನೀರಾವರಿಗೆ ಆದ್ಯತೆ ಕೊಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?*

ಈ) ಹನಿ ನೀರಾವರಿಗೆ ಕೊಡುವ ರಿಯಾಯಿತಿ ಪ್ರಮಾಣವನ್ನು ಹೆಚ್ಚಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಉ) ಇದ್ದಲ್ಲಿ, ಅದರ ಪ್ರಮಾಣವೆಷ್ಟು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ರೂ. 2,59,926-00

ಆ)

	ಫಲಾನುಭವಿಗಳ ಸಂಖ್ಯೆ	*ನೀಡಿರುವ ಸಹಾಯ ಧನ*
1. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು	27	ರೂ.1,75,890
2. ದೊಡ್ಡ ಹಿಡುವಳಿದಾರರು	16	ರೂ. 84,036
ಒಟ್ಟು	43	ರೂ.2,59,926

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಹೊಸ ಹನಿ ನೀರಾವರಿ ಯೋಜನೆಯೊಂದನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಅಜಯ ಕುಮಾರ್ ಸರನಾಯಕ್: ಉತ್ತರದಲ್ಲಿ ಮಾನ್ಯ ಮಂತ್ರಿಗಳು ಈ ಡ್ರಿಪ್ ಇರಿಗೇಶನ್‌ಗೆ 2ಲಕ್ಷ 60 ಸಾವಿರ ರೂಪಾಯಿ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಇದೇನು ಬಿಜಾಪುರ ಜಿಲ್ಲೆಗೆ ಮಾತ್ರವೋ? ಅಥವಾ ಇದೇ ಕರ್ನಾಟಕ ರಾಜ್ಯಕ್ಕೇ ಸಂಬಂಧಪಟ್ಟಿದ್ದೇ? ಎಂಬುದು ನನ್ನ ಮಾದಲನೇ ಪ್ರಶ್ನೆ. ಆಮೇಲೆ ಡ್ರಿಪ್ ಇರಿಗೇಶನ್‌ಗೆ ಇದೇನು ಸ್ಕೀಮ್ ಇದೆ, ಇದು ಸೊಸಿಯಲ್‌ಲ್ ವೆಲ್‌ಫೇರ್ ಸ್ಕೀಮ್ ಅಲ್ಲ. It is the question of technology.

* * *

ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ... It is the question of technology which has to be adopted . It should be considered in that respect. It should be considered in respect of adopting the technology.

ಈ ದಿಸೆಯಲ್ಲಿ ವಿಚಾರ ಈ ಡ್ರಿಪ್ ಇರಿಗೇಶನ್‌ಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂಥ ವಿಚಾರ ಬಹಳ ಪ್ರಮುಖವಾದದ್ದು. ಇದನ್ನು 8ನೇ ಯೋಜನೆಯಲ್ಲಿ ನಾವು ಈಗಾಗಲೇ ಸೇರಿಸಿಕೊಂಡಿದ್ದೇವೆ. ಇದನ್ನು ಜನಪ್ರಿಯ ಕಾರ್ಯಕ್ರಮವನ್ನಾಗಿ ಮಾಡಬೇಕೆಂದು ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದೆ. 8ನೇ ಯೋಜನೆಯಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗುವುದು.

ಅಧ್ಯಕ್ಷರು: ಉತ್ತರ ಹೇಳಿದ್ದಾರೆ. There is a new scheme for drip irrigation covering all districts is under consideration of the Government.

ಕನ್ಸಿಡರೇಶನ್ ಎಂದು ಹೇಳಿದ್ದಾರೆ.

ಶ್ರೀ ಎಸ್. ಅಜಯಕುಮಾರ್ ಸರನಾಯಕ್ : ಈ ಸಬ್ಸಿಡಿ ಅಮೌಂಟ್ ಏನಿದೆ, ಇದರ ಡಿಸ್ಬರ್ಸಲ್‌ನಲ್ಲಿ ಪ್ರೊಸೀಜರ್ ಮ್ಯಾಟರ್ಸ್ ಏನಿದೆ, ಅದರಲ್ಲಿ ಕಷ್ಟ ಇದೆ. ಅದು ಸುಲಭವಾಗಿರಬೇಕು. ಇದು ನನ್ನ ಕೋರಿಕೆ.

ಅಧ್ಯಕ್ಷರು: ಈ ಪ್ರೊಸೀಜರ್‌ನ್ನು ಸುಲಭ ಮಾಡಬೇಕೆಂದು ಅವರ ಕೋರಿಕೆ ಇದೆ.

ಶ್ರೀ ಜೆ.ಸಿ. ಮಧುಸ್ವಾಮಿ : ಮೊದಲು ಇದು ಆರಂಭವಾದಾಗ 60 ಪರ್ಸೆಂಟ್ ಇತ್ತು. ಆಮೇಲೆ 40 ಪರ್ಸೆಂಟ್ ಆಗಿ ಈಗ 20 ಪರ್ಸೆಂಟ್ ಮಾತ್ರ ಸಬ್ಸಿಡಿ ಕೊಡುತ್ತಿದ್ದಾರೆ. ಇವತ್ತು ಬೋರ್‌ವೆಲ್‌ನ ಈಲ್ಡ್ ಬಹಳ ಕಡಿಮೆ ಆಗಿದೆ. ಆದರಲ್ಲೂ ಹಾರ್ಟಿಕಲ್ಚರ್ ಕ್ರಾಪ್ ಇರುವ ಕಡೆ, ಇವತ್ತು ಯಾವುದೇ ಬೋರ್‌ವೆಲ್‌ನಲ್ಲಿ ತೋಟಗಾರಿಗೆ ಮಾಡುತ್ತೇವೆ ಎಂದರೆ ಸಾಧ್ಯವಿಲ್ಲ. ಇಂತಹ ಸ್ಥಿತಿಯಲ್ಲಿ ನೀವು ಸಬ್ಸಿಡಿ ಕಡಿಮ ಮಾಡಿರುವುದು ಒಂದು ರೀತಿಯಲ್ಲಿ ನಮಗೆ ಮಾರಕವಾಗಿದೆ. ಆದ್ದರಿಂದ ಸಬ್ಸಿಡಿಯನ್ನು ಮುಂದುವರೆಸಬೇಕು ಮತ್ತು ಅದನ್ನು ಜಾಸ್ತಿ ಮಾಡಿಕೊಡದೇ ಹೋದರೆ ಇವತ್ತು ಭೂಮಿಯಲ್ಲಿ ಈಗಾಗಲೇ ನೀರು ಕಡಿಮೆಯಾಗಿದೆ. ಇದನ್ನು ತಾವು ಎನ್‌ಕರೇಜ್ ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ. ಇದನ್ನು ಜಾಸ್ತಿ ಮಾಡುವ ಬಗ್ಗೆ ಕನ್ಸಿಡೆರೇಶನ್ ಕೊಡಲೇಬೇಕಾಗುತ್ತದೆ. ತಾವು ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಮತ್ತೆ ಶ್ರೀ ದೇವಿಲಾಲ್‌ಅವರು ಕೋಲಾರ ಜಿಲ್ಲೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ನಾವು 50 ಪರ್ಸೆಂಟ್‌ಮಾಡಿದ್ದೆವು ಅಂತ ಹೇಳಿ...

ಅಧ್ಯಕ್ಷರು: ಶ್ರೀ ದೇವಿಲಾಲ್ ಅವರು ಕೋಲಾರದಲ್ಲಿ ಎರಡು ಮೂರು ಹೇಳಿಕೆ ಕೊಟ್ಟು ಹೋದರು.

ಶ್ರೀ ಜೆ.ಸಿ. ಮಧುಸ್ವಾಮಿ : ಅವರು ಕೃಷಿ ಮಂತ್ರಿಯಾಗಿ ಹೇಳಿಕೆ ಕೊಟ್ಟಿದ್ದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅವರು ಕೃಷಿ ಮಂತ್ರಿಯಾಗಿ ಏನು ಹೇಳಿದ್ದರು ಏನೆಂದರೆ, 50 ಪರ್ಸೆಂಟ್ ಮಾಡಿದ್ದೇವೆ ಎಂದು. ಈ ಕನ್ಸಿಡೆರೇಶನ್‌ನನ್ನು ಸರ್ಕಾರ ಏನಾದರೂ ಹಾಕಿಕೊಳ್ಳುತ್ತಿದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸಣ್ಣ ನೀರಾವರಿ ಯೋಜನೆ ಈ ರಾಜ್ಯದಲ್ಲಿ ಕೇವಲ ಆರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಇದರಲ್ಲಿ ತೋಟಗಾರಿಗೆ ಬೆಳೆಗಳನ್ನು ಮಾತ್ರ ಸೀಮಿತವಾಗಿ ಮಾಡಿದ್ದು ಕೆಲವರಿಗೆ 50 ಪರ್ಸೆಂಟ್ ಮತ್ತು 20 ಪರ್ಸೆಂಟ್ ಹೀಗೆಲ್ಲ ಕೊಟ್ಟು ಮಾಡಲಾಗುತ್ತಿದೆ. ಇದರ ಪ್ರಾಮುಖ್ಯತೆಯನ್ನು ಅರಿತು, ಇದರಿಂದ ಆಗತಕ್ಕಂಥ ಹೆಚ್ಚು ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಂಡು ನಾವು ಈ ಸಾರಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಇದನ್ನು ವಿಸ್ತರಿಸಬೇಕೆಂದು ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಮತ್ತು ಈ ಒಂದು ತೋಟಗಾರಿಗೆ ಬೆಳೆಗೆ ಅಷ್ಟೇ ಅಲ್ಲದೆ, ಕೆಲವು ಸೆಲೆಕ್ಟಿವ್ ಕೃಷಿ ಬೆಳೆಗಳಿಗೆ ಕೂಡ ಈ ಯೋಜನೆಯನ್ನು ವಿಸ್ತರಿಸತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಈ ಸಾರಿಯಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ಕೊಡುತ್ತಿದ್ದೇವೆ.

ಶ್ರೀ ಎಸ್. ರುದ್ರಪ್ಪ : ಈಗ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಅಡಿಕೆ ಮತ್ತು ತೆಂಗಿನ ತೋಟ ಬಪಳ ಹೋಗುತ್ತಾ ಇದೆ. ಡ್ರಿಪ್ ಇರಿಗೇಶನ್‌ನಲ್ಲಿ ಕೇವಲ 2 ಇಂಚು ನೀರು ರೈತರಿಗೆ ಸಿಕ್ಕಿದ್ದೇ ಆದರೆ ಸುಮಾರು ಐನೂರು-ಆರುನೂರು ತೆಂಗಿನ ಗಿಡಗಳನ್ನು ಈ ಹನಿನೀರಾವರಿಯಿಂದ ಉಪಯೋಗಿಸಿಕೊಳ್ಳಬಹುದಾಗಿದೆ. ಆದರೆ ಸರ್ಕಾರದವರು ಈಗ ಕೊಡತಕ್ಕಂಥ ಸಬ್ಸಿಡಿ ಕೇವಲ ಎಂಟು ಸಾವಿರ ರೂಪಾಯಿಗಳು, ಒಬ್ಬ ರೈತರಿಗೆ. ಆದ್ದರಿಂದ ನಮ್ಮ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು 50 ಪರ್ಸೆಂಟ್ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿದ್ದೇ ಆದರೆ ರೈತರು ತೆಂಗಿನ ತೋಟದ ಬೆಳೆಯನ್ನು ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಅಧ್ಯಕ್ಷರ ಮುಖಾಂತರ ಸಚಿವರಲ್ಲಿ ಕೇಳಿಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ: ಇದನ್ನು ಪರಿಶೀಲಿಸಲಾಗುತ್ತದೆ.

ಅಧ್ಯಕ್ಷರು: ಪುನಃ ನಂಜುಂಡಸ್ವಾಮಿ...

ಶ್ರೀ ಸಿ. ಬೈರೇಗೌಡ: ಕೊನೇ ಪಕ್ಷ ಕೊಡುತ್ತೇವೆ ಎನ್ನತಕ್ಕಂಥ ಸೂತ್ರವನ್ನು ಒಪ್ಪಿದರೆ ರೈತರಿಗೆ ಪ್ರಯೋಜನವಾಗುತ್ತದೆ. ಎಲ್ಲಾ ರೈತರಿಗೂ, ಅವರು ಸಣ್ಣ ರೈತರಿರಲಿ, ದೊಡ್ಡ ರೈತರಿರಲಿ ವ್ಯತ್ಯಾಸ ಇಲ್ಲದೆ, ಯಾರು ಯಾರು ಹಾಕಿಸಿಕೊಳ್ಳಬೇಕೆಂದಿದ್ದಾರೆ, ಅವರಿಗೆಲ್ಲಾ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಇದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗುವುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಬ್ಸಿಡಿ ಬಗ್ಗೆ ಬಹಳ ಮಾತನಾಡಬಹುದು. ವಿಶೇಷವಾಗಿ ಈ ಡ್ರಿಪ್ ಇರಿಗೇಷನ್ ಬಗ್ಗೆ ಸಬ್ಸಿಡಿ 2 ಲಕ್ಷ 60 ಸಾವಿರ ಕೊಟ್ಟಿದ್ದೀರಿ, ಮತ್ತೆ ಇಲ್ಲಿ ಹೇಳುತ್ತೀರಿ,

"A new scheme for drip irrigation system covering all the districts are under consideration" ಹೊಸ ಸ್ಕೀಮ್ ಏನು ಎಂದು. ನಾನು ತಮ್ಮ ಮೂಲಕ ..... ಕೃಷಿ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ 2 ಲಕ್ಷದ 60 ಸಾವಿರ ಏನು ಸಬ್ಸಿಡಿ ಕೊಟ್ಟಿದ್ದೀರಿ. ಆದರೆ ಈ ಡ್ರಿಪ್ ಇರಿಗೇಷನ್ ಬಹಳಷ್ಟು ಸಣ್ಣ ಸಣ್ಣ ವಸ್ತುಗಳು ಬೇಕು. ಇವುಗಳನ್ನು ತಯಾರು ಮಾಡುವಂಥ. ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕು. With an investment of just Rs. 20,000 you can start a drip irrigation unit which can manufacture the components.

ದಯಮಾಡಿ ಏತಕ್ಕೆ ಇದು ಬಹಳ ಪ್ರಾಮುಖ್ಯವಾದ ವಿಷಯ ಎಂದರೆ ಅವರು ಪ್ರೀಮಿಯರ್ ಇರಿಗೇಷನ್‌ಗೆ ಹೋಗುತ್ತಾರೆ. ಅಥವಾ ಇನ್ಯಾವುದಕ್ಕೋ ಹೋಗುತ್ತಾರೆ. ಅವರು ಕೃತಕವಾದ ಬೆಲೆಯಲ್ಲಿ ಸರಬರಾಜು ಮಾಡುತ್ತಾರೆ. ನೀವು ಸಬ್ಸಿಡಿಯನ್ನು ಪ್ರೀಮಿಯರ್ ಇರಿಗೇಷನ್‌ಗೆ ಕೊಡುತ್ತೀರಿ. ಆದ್ದರಿಂದ ನಾನು ವಿನಂತಿ ಮಾಡುವುದು, ಏನೆಂದರೆ ಸರ್ಕಾರಿ ಕ್ಷೇತ್ರದಲ್ಲಿ ಪ್ರತಿ ಜಿಲ್ಲೆಗೊಂದರಂತೆ ಡ್ರಿಪ್ ಇರಿಗೇಷನ್ ಕಾರ್ಖಾನೆಯನ್ನು ತೆರೆಯುವುದು ಅತ್ಯಂತ ಅವಶ್ಯಕವಾಗಿದೆ. We are reaching a point where we have to meet the drip irrigation as a compulsory component before we energise any IP set.. ಆದ್ದರಿಂದ ಇಂತಹ 20 ಕಾರ್ಖಾನೆಗಳನ್ನೂ ತೆರೆಯುತ್ತೀರಾ? ದಯಮಾಡಿ ಆಲೋಚನೆ ಮಾಡಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಈವರೆಗೆ ಹನಿ ನೀರಾವರಿ ಯೋಜನೆ ತೃಪ್ತಿಕರವಾಗಿ ನಡೆದಿಲ್ಲ. ಏಕೆ ಎಂದು ವಿವರಣೆ ಕೊಡತಕ್ಕ ಅಗತ್ಯವೂ ಇಲ್ಲ. ಈ ಸಾರಿ ನೀರಿನ ಪ್ರಾಮುಖ್ಯತೆಯನ್ನು ಅರಿತು, ಇದರ ಬಗ್ಗೆ ಹೆಚ್ಚು ತೀವ್ರವಾಗಿ ಕಾರ್ಯಕ್ರಮ ಮಾಡಬೇಕೆಂಬ ತೀರ್ಮಾನದ ಹಿನ್ನೆಲೆಯಲ್ಲಿ, ಈ ಸಾರಿಯ ಬಜೆಟ್‌ಗೆ ಅಂದರೆ, 1991-92 ರಲ್ಲಿ 75 ಲಕ್ಷ ಕೊಡಬೇಕಾಗುತ್ತದೆಂದು ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿದ್ದೇವೆ. ನಾವು 40 ಲಕ್ಷ ಇಟ್ಟುಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ. ಪ್ರೊ ನಂಜುಂಡಸ್ವಾಮಿಯವರು ಹೇಳಿರುವುದು ಅತ್ಯುತ್ತಮ ಸಲಹೆ, ಪರಿಶೀಲನೆಗೆ ಯೋಗ್ಯವಾದುದು. ಈ ವಿಷಯದಲ್ಲಿ ಪ್ರಯತ್ನ ಮಾಡುತ್ತೇವೆ.

ಬಿಜಾಪುರ ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣೆ

1750 - ಶ್ರೀ ಆರ್. ಬಿ. ತಿಮ್ಮಾಪುರ (ಮುಧೋಳ) : ಮಾನ್ಯ ಕೃಷಿ ಮತ್ತು ತೋಟಗಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣೆಗಾಗಿ ಈ ಕೆಳಗಿನ ಯೋಜನೆಗಳಡಿಯಲ್ಲಿ ದಿನಾಂಕ 1-4-90 ರಿಂದ 4-3-91 ರವರೆಗೆ ಆದ ಆಯ್ ಮತ್ತು ವ್ಯಯದ (ಖರ್ಚಿನ ಬಗ್ಗೆ) ವಿವರ ಎಷ್ಟು?